★★★

ನಮ್ಮ ಮನೆ ನಿಮಗೆ ಹೇಗೆನಿಸುತ್ತಿದೆ ಸುನಯನ? ಈಗ ಒಗ್ಗಿರಬೇಕಲ್ಲ. ಅದೇನೋ ಮೊದಲಿನಿಂದ ನಮ್ಮಲ್ಲಿ ಮಾತಿಗಿಂತ ಮೌನವೇ ಹೆಚ್ಚು, ಹಾಗೆಂದು ನಮ್ಮಲ್ಲಿ ಪ್ರೀತಿ, ಅಂತಃಕರಣಕ್ಕೇನೂ ಕೊರತೆಯಿಲ್ಲ. ಅಮ್ಮ ಎಲ್ಲವನ್ನೂ ಕಣ್ಣಲ್ಲೇ ಹೇಳಿಬಿಡುವ ಶಕ್ತಿಪಡೆದಿರುವಾಕೆ. ನೋಡಿದಿರಲ್ಲ ನೀವೇ – ಆಕೆ ಸಾಕಿದ ಹಸು, ಬೆಳೆಸಿದ ಗಿಡ ಹೂಗಳೆಂದರೆ ಅವಳಿಗೆಷ್ಟು ಪ್ರಾಣವೆಂದು. ಆಕೆಗೆ ನಾನು, ಆ ಮರ, ಹಸು ಬೇರೆಬೇರೆಯಲ್ಲ. ಆಕೆ ನಿಮ್ಮನ್ನು ಸಹ ತನ್ನವರೆಂದೇ ತಿಳಿದಿದ್ದಾಳೆ. ನೀವೇ ನೋಡುತ್ತೀರಿ, ಆಕೆ ನಿಮ್ಮನ್ನು ಹಚ್ಚಿಕೊಂಡುಬಿಟ್ಟರೆ ಮತ್ತೆಂದೂ ಬಿಟ್ಟಿರಲಾಗದಂತೆ ಮಾಡಿ ಬಿಡುತ್ತಾಳೆ. ಅವಳ ಪಕ್ಕ ಮಲಗುತ್ತೀರಲ್ಲ, ಏನನಿಸುತ್ತದೆ? ಮೊನ್ನೆಯವರೆಗೂ ಅವಳ ಬೆಚ್ಚನೆ ಎದೆಯ ಶಾಖ ಪಡೆದು ನಿದ್ದೆ ಮಾಡುತ್ತಿದ್ದ ಮರಿ ನಾನು. ಅವಳ ಎದೆಬಡಿತಕ್ಕೆ ಸಂಗೀತದ ಲಯವಿದೆ ಎನ್ನಿಸಿದ್ದಿದೆ ನನಗೆ. ನಿಮಗೆ ಹೇಗೊ – ನನಗೆ ಮಾತ್ರ ಆಕೆ ಎಲ್ಲ... ಹೌದು. ಮಧ್ಯಾಹ್ನವೆಲ್ಲ ಹೇಗೆ ಕಳೆಯುತ್ತೀರಿ ನೀವಿಬ್ಬರು? ಆಗ ನಾನಿರುವುದಿಲ್ಲವೆಂದು ಬೇಸರವಾಗುತ್ತದೆಯೇ? ಅದೂ ಅಭ್ಯಾಸವಾಗುತ್ತದೆ ಬಿಡಿ. ನಿಮಗಿಷ್ಟವಾದರೆ ಅಮ್ಮನಿಂದ ದೇವರನಾಮಗಳನ್ನು ಹೇಳಿಸಿಕೊಳ್ಳಿ. ಆಕೆ ಸೊಗಸಾಗಿ ಹಾಡುತ್ತಾಳೆ. ಅವಳು ಕಥೆಗಳನ್ನು ಸಹ ಬಹಳ ಚೆಂದ ಹೇಳುತ್ತಾಳೆ. ಆಕೆಯ ಕಣಜದಲ್ಲಿ ನೂರಾರು ಕಥೆಗಳಡಗಿವೆ. ಅವನ್ನು ಹೆಕ್ಕಿ, ಅದರಿಂದ ನಿಮಗೂ ಉಪಯೋಗವಾದೀತು. ಕಥೆ, ಬರೆಯಲು ವಸ್ತು ಸಿಕ್ಕೀತು. ಅವಳ ಅನುಭವಗಳನ್ನು ಕೆದಕಿ, ನೊಂದ ವೃತ್ತಾಂತ ಕೇಳಿದರೆ ಜಗತ್ತಿನಲ್ಲಿ ನೊಂದವಳು ನಾನೊಬ್ಬಳೇ ಅಲ್ಲ ಇನ್ನೂ ಎಷ್ಟೋ ಜನವಿದ್ದಾರೆ ಎಂಬ ಧೈರ್ಯಬಂದೀತು. ಬದುಕಿಗೆ ಹೊಸ ಚೇತನ ಬಂದು ನಂಬಿಕೆ ಕುದುರೀತು. ನಾವು ಕಲಿಯಬೇಕಿರುವುದು ಪುಸ್ತಕಗಳಿಂದಲ್ಲ. ನಮ್ಮ ಹಿರಿಯರಿಂದ ಎಂದು ನನಗೆಷ್ಟೋ ಸಲ ಅನ್ನಿಸಿದೆ.

ಹೌದು, ನಾನ್ಯಾಕೆ ಇಷ್ಟು ಬಡಬಡಿಸುತ್ತಿದ್ದೇನೆ? ಏನಾಗಿದೆ ನನಗೆ, ನಂಬಿ – ನಾನ್ಯಾವತ್ತೂ ಇಷ್ಟೊಂದು ಮಾತಾಡಿದವನೇ ಅಲ್ಲ, ನಿಮ್ಮನ್ನು ಕಂಡಾಗಿನಿಂದ ನಾಲಿಗೆ ಸುಮ್ಮನೆ ನಿಲ್ಲುತ್ತಿಲ್ಲ. ನೀವು ಕೇಳುತ್ತಿದ್ದೀರೊ, ಇಲ್ಲವೋ ಎಲ್ಲವುದರ ಪರಿವೆಯೇ ಇಲ್ಲದೆ ವಟಗುಡುತ್ತಿರುತ್ತದೆ. ವಯಸ್ಸಾದ ಅರಳು–ಮರಳು ಮುದುಕನ ಹಾಗೆ ನಾನನ್ನಿಸಿದರೆ ಕ್ಷಮಿಸಿ ಎನ್ನಲಾರೆ – ನಾನು ಹೀಗೆ ಬುಡುಬುಡುಕಿಯವನಾಗುವುದಕ್ಕೆ ಕಾರಣ ನೀವೇ ಸುನಯನಾ.

ಸುನಯನಾ, ನಿಮ್ಮ ಹೆಸರು ಎಷ್ಟು ಚೆಂದವಿದೆಯೆಂದರೆ ಅದನ್ನೇ ಗುನುಗುತ್ತಿರಬೇಕೆನ್ನಿಸುತ್ತದೆ. ರಾತ್ರಿ – ನೀವು – ಅಮ್ಮ ನಿದ್ರಿಸುವಾಗ ನಾನೇನು ಮಾಡುತ್ತೇನೆ ಗೊತ್ತೆ? ಬಾಗಿಲ ಮರೆಗೆ ಕೂತು ನಿಮ್ಮ ಮುಖವನ್ನೇ ದಿಟ್ಟಿಸುತ್ತಿರುತ್ತೇನೆ. ನಿದ್ದೆಯಲ್ಲಿದ್ದಾಗ ನೀವು ಮಗುವಿನಂತೆ ಕಾಣುತ್ತೀರಿ. ಆಗೀಗ ಏನೋ ಗುನುಗುಕೊಳ್ಳುತ್ತಿರುತ್ತೀರಿ. ಏನನ್ನು? ಹೋಗಲಿ ಬಿಡಿ. ನಾವು ಹೊಸಬರಾದರೂ ಅಪರಿಚಿತರೆಂದೇನೂ ಅನ್ನಿಸುತ್ತಿರಲಿಲ್ಲ... ನಿಮಗೆ ನಮ್ಮ ಮನೆಯ ತೋಟದ ಹಾಗೆ ನಾವು ಕೂತುಕೊಳ್ಳುವ ಬಂಡೆಯತುದಿಯೂ ಇಷ್ಟವಾಗಿದೆಯಲ್ಲವೆ? ಅದನ್ನು ಅಂತರಗಂಗೆ ಬೆಟ್ಟದ ತುದಿ ಎನ್ನುತ್ತಾರೆ. ಆ ಬಂಡೆಗಿಂತ ತುಸು ಮೇಲೆ ಹೋದರೆ ಅಲ್ಲಿ ನೀರಿನ ಸೆಲೆಯಿದೆ; ನಾನು ಚಿಕ್ಕಂದಿನಿಂದ ಅಲ್ಲಿ ಎಷ್ಟೋ ದಿನಗಳನ್ನು ಕಳೆದಿರುವೆ. ಈಗಲೂ ಬೆಟ್ಟಕ್ಕೆ ಹೋಗಿಬಿಟ್ಟರೆ ನನ್ನನ್ನೇ ಮರೆತುಬಿಡುವೆ ನಾನು. ನೀವೂ ಮಾತನಾಡಿ ಸುನಯನ. ನಾನೊಬ್ಬನೇ ಖಬರುಹಾರಿ ಬಡಬಡಿಸುತ್ತಿದ್ದೇನಲ್ಲ. ನಿಮ್ಮದು